# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮೂಡಬಿದ್ರೆ

## ಸಿ.ಸಿ. ಸಂಖ್ಯೆ: 573/2024

ಪಿ.ಡಬ್ಲ್ಯೂ: 08
ಸಿ.ಡಬ್ಲ್ಯೂ: 12

**ಸಾಕ್ಷಿಗೆ ದಿಃ 15.12.2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.**

| | | |
|---|---|---|
| ಹೆಸರು | : | ಹರೀಶ್ |
| ತಂದೆಯ ಹೆಸರು | : | ದಿ. ರಾಮ |
| ಪ್ರಾಯ | : | 50 |
| ಉದ್ಯೋಗ | : | ಕ್ಲರ್ಕ್ |
| ವಿಳಾಸ | : | ಮುಲ್ಕಿ |

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ದಿಃ15.03.2024 ರಂದು ಹಳೆಯಂಗಡಿ ಗ್ರಾಮ ಪಂಚಾಯತ್ ಗೆ ನಾನು ಬೆಳಗ್ಗೆ 10 ಗಂಟೆಗೆ ಕೆಲಸಕ್ಕೆ ಬಂದಿದ್ದು ಅಂದು ಚಾಸಾ1 ರವರು ಹಳೆಯಂಗಡಿ ಗ್ರಾಮ ಪಂಚಾಯತ್ ಗೆ ಬಂದಿರುತ್ತಾರೆ. ಅವರು ನಮ್ಮನ್ನು ಪಿಡಿಒ ರವರ ಕಚೇರಿಗೆ ಕರೆದು ನಾವು ಮಾಡುತ್ತಿರುವ ಕರ್ತವ್ಯದ ಬಗ್ಗೆ ಮಾಹಿತಿಯನ್ನು ಪಡೆದಿರುತ್ತಾರೆ. ಇದಾದ ನಂತರ ನಾನು ನನ್ನ ಕರ್ತವ್ಯದಲ್ಲಿ ನಿರತನಾಗಿದ್ದು ನಾನು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನಾನು ಆರಕ್ಷಕರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕಾಗಿ ಸರ್ಕಾರಿ ಸಹಾಯಕ ಅಭಿಯೋಜಕರು ಕೋರಿಕೊಂಡಿದ್ದು ಸಕಾರಣ ಇದ್ದುದರಿಂದ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ಚಾಸಾ1 ರವರು ರೋಹಿತ್ ಎಂಬವರಿಗೆ ಪಾವಂಜೆ ಗ್ರಾಮದಲ್ಲಿ ನೀರಿನ ಸಂಪರ್ಕ ಮಾಡಲು ಹೋಗುವ ಎಂದು ತಿಳಿಸಿ ಪಂಪ್ ಆಪರೇಟರ್ ರವರನ್ನು ಕರೆಯಿಸಿದ್ದು ಪ್ಲಂಬಿಂಗ್ ಕೆಲಸ ಅವರಿಗೆ ತಿಳಿಯದೇ ಇದ್ದುದರಿಂದ ಬೇರೆಯವರಿಂದ ಮಾಡಿಸುವುದಾಗಿ ಪಿಡಿಓ ರವರು ತಿಳಿಸಿದರು, ನಂತರ ಫೋನ್ ಮಾಡಿ ಸಂಪರ್ಕಿಸಿದಾಗ ಅವರು ಬರಲು ಸಾಧ್ಯವಿಲ್ಲವೆಂದು ತಿಳಿಸಿದಂತೆ ಸ್ಥಳಕ್ಕೆ ಹೋಗುವಂತೆ ಪಿಡಿಓ ರವರಲ್ಲಿ ತಿಳಿಸಿದರು, ಆಗ ಹಳೆಯಂಗಡಿ ಗ್ರಾಮ ಪಂಚಾಯತ್ ನಲ್ಲಿದ್ದ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಪೂರ್ಣಿಮಾ ರವರು ನೀವು ಯಾರಿಗೆ ನೀರಿನ ಸಂಪರ್ಕ ಕೊಡಿಸಲು ಬಂದಿದ್ದೀರಿ, ನಾನು ಪಂಚಾಯತ್ ನಿಂದ ಯಾರನ್ನು ಹೊರಗೆ ಹೋಗಲು ಬಿಡುವುದಿಲ್ಲ ಎಂದು ಚಾಸಾ1 ರವರನ್ನು ಉದ್ದೇಶಿಸಿ ರೇಗಾಡಿದರು, ಬೆಳಿಗ್ಗೆ ಸುಮಾರು 11–10 ಗಂಟೆಗೆ ಚಾಸಾ1 ರವರು ಹಳೆಯಂಗಡಿ ಗ್ರಾಮ ಪಂಚಾಯತ್ ಕಛೇರಿಯಿಂದ ಹೊರ ಹೋಗುತ್ತಾ ಬಾಗಿಲಿನ ಹೊರಭಾಗದಲ್ಲಿ ಇದ್ದ ವೇಳೆ ಗ್ರಾಮ ಪಂಚಾಯತ್ ನ ಅಧ್ಯಕ್ಷೆ ಶ್ರೀಮತಿ ಪೂರ್ಣಿಮಾ, ವಿನೋದ್ ಕುಮಾರ್, ಸುಕೇಶ್, ನಾಗರಾಜ್, ರವರು ಚಾಸಾ1 ರವರನ್ನು ತಡೆದು ನೀರಿನ ಸಂಪರ್ಕ ಕೊಡದಂತೆ ಜೋರಾಗಿ ಮಾತಿನ ಆಕ್ಷೇಪ ವ್ಯಕ್ತಪಡಿಸುತ್ತಿರುವ ಮಾತನ್ನು ಕಛೇರಿಯೊಳಗಿದ್ದು ಕೇಳಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಇದಾದ ನಂತರ ಚಾಸಾ1 ರವರನ್ನು ಲೈಬ್ರರಿ ಬಳಿ ಗ್ರಾಮ ಪಂಚಾಯತ್ ನ ಅಧ್ಯಕ್ಷರಾದ ಶ್ರೀಮತಿ ಪೂರ್ಣಿಮಾ, ಹಾಗೂ ಗ್ರಾಮ ಪಂಚಾಯತ್ ಸದಸ್ಯರಾದ ಸುಕೇಶ್, ನಾಗರಾಜ್, ಚಂದ್ರಿಕಾ ಪ್ರವೀಣ್, ಶ್ರೀಮತಿ ಸುಮಂಗಲ ಭಟ್ ಜೀವನ್ ಪ್ರಕಾಶ್ ಮತ್ತಿತರರು ಅಕ್ರಮವಾಗಿ ತಡೆದು ನಿಲ್ಲಿಸಿ ನೀರಿನ ಸಂಪರ್ಕ ಕೊಡಿಸುವ ಬಗ್ಗೆ ವಾಗ್ವಾದ ನಡೆಸಿದ್ದಾಗಿ ಹಾಗೂ ಚಾಸಾ1 ರವರು

ತಮ್ಮ ಜೀಪಿನಲ್ಲಿ ಹೋಗಲು ಮುಂದಾದಾಗ ಆರೋಪಿಗಳಾದ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಪೂರ್ಣಿಮಾ, ಸುಕೇಶ್, ಚಂದ್ರಿಕಾ, ಪ್ರವೀಣ್, ವಿನೋದ್, ಅಶ್ವಿನ್, ನಾಗರಾಜ್, ಜೀವನ್ ಪ್ರಕಾಶ್, ಸುಮಂಗಲ ಭಟ್. ಸವಿತಾ ಯು ಸಾಲ್ಯಾನ್ ರವರು ರವರು ಚಾಸಾ1 ರವರ ಜೀಪನ್ನು ಮತ್ತೊಮ್ಮೆ ಅಕ್ರಮವಾಗಿ ತಡೆದು ನಿಲ್ಲಿಸಿರುವುದಾಗಿ ನನಗೆ ತಿಳಿಯಿತು ಎಂದರೆ ಸರಿಯಲ್ಲ.

ಹಳೆಯಂಗಡಿ ಗ್ರಾಮ ಪಂಚಾಯತಿನಿಂದ ರೋಹಿತ್ ಎಂಬವರು ನೀರಿನ ಸಂಪರ್ಕ ಕೋರಿ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿ ಹಳೆಯಂಗಡಿ ಗ್ರಾಮ ಪಂಚಾಯತ್ ನಲ್ಲಿ ವಿರೋಧ ವ್ಯಕ್ತವಾಗಿದ್ದು, ಬಳಿಕ ರೋಹಿತ್ ರವರು ಚಾಸಾ1 ರವರ ನ್ಯಾಯಾಲಯಲ್ಲಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿ ವಿಚಾರಣೆ ನಡೆಸಿ ಚಾಸಾ1 ರವರಿಗೆ ನೀರಿನ ಸಂಪರ್ಕ ಕೊಡಿಸಲು ಮುಂದಾದ ವೇಳೆ ಹಳೆಯಂಗಡಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಪೂರ್ಣಿಮಾ ಮತ್ತು ಇತರರು ಸೇರಿ ಚಾಸಾ1 ರವರನ್ನು ಅಕ್ರಮವಾಗಿ ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿ ಬೆದರಿಕೆ ಒಡ್ಡಿ ಕರ್ತವ್ಯ ನಿರ್ವಹಿಸಿದಂತೆ ತಡೆದಿರುವುದಾಗಿದೆ ಎಂದರೆ ಸರಿಯಲ್ಲ.

ಈ ಬಗ್ಗೆ ನನಗೆ ಈಗ ಓದಿ ತಿಳಿಸಿದಂತೆ "ನಾನು ಮೇಲಿನ ವಿಳಾಸದಲ್ಲಿ ............. ತಡೆದಿರುವುದಾಗಿದೆ" ಎಂದು ನಿಪಿ11 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈ ದಿನ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

ನ್ಯಾಯಾಲಯದ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ